
ಪರಿಹಾರಗಳೆಂದು ಕಾಣುವ ಸಮಾಧಾನದಲ್ಲಿರುವ ಪದರಗಳು ಕ್ಲಿಷ್ಟವಾದುವು. ಅವನ್ನು ಬಿಡಿಸಿ ನೋಡುವ ಅವಶ್ಯಕತೆ ನಮಗಿದೆ. ನಾವು ಕಂಡುಕೊಳ್ಳುವ ಪರಿಹಾರಗಳಲ್ಲಿ ಅನೇಕ ಮಿತಿಗಳಿವೆ. ಆ ಮಿತಿಗಳನ್ನು ಗುರುತಿಸಿದಾಕ್ಷಣಕ್ಕೆ ನಾವು ಕೈಗೊಳ್ಳುವ ಕೆಲಸದಲ್ಲಿ ಒಂದು ಹಿಂಜರಿಕೆ ಮತ್ತು ಘನತೆಯನ್ನು ತರುವುದರಲ್ಲಿ ಸಫಲರಾಗುತ್ತೇವೆ. ನಮ್ಮ ಕಾರ್ಯದ ನಕಾರಾತ್ಮಕ ಪ್ರತಿಫಲವನ್ನು ನಾವು ಗುರುತಿಸಿದಾಗ- ಎದುರಿನ ವ್ಯಕ್ತಿ- ಸಂಪನ್ಮೂಲಕ್ಕೆ ಅತ್ಯಂತ ಕಡಿಮೆ ಧಕ್ಕೆಯನ್ನುಂಟುಮಾಡುತ್ತೇವೆ. ಇದಕ್ಕೆ ಸ್ಟಿಗ್ಲಿಟ್ಸ್ ಕೊಡುವ ಅತ್ಯಂತ ಸರಳ (ಮತ್ತು ನಾವೆಲ್ಲರೂ ಗುರುತಿಸಿಕೊಳ್ಳುವಂತಹ) ಉದಾಹರಣೆ, ಸಂಚಾರ ನಿಯಮಗಳಿಗೆ ಸಂಬಂಧಿಸಿದ್ದು. ಸಂಚಾರ ನಿಯಮಗಳು ನಮ್ಮ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುತ್ತವೆ; ಹೀಗಾಗಿ ಅವು ಅ-ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತವೆ. ಆ ನಿಯಮಗಳಿಂದಾಗಿ ಸರ್ಕಾರ ನಮ್ಮನ್ನು ದಂಡಿಸುವ ಸಾಧ್ಯತೆಯೂ ಇದೆ. ಆದರೆ ಈ ಅ-ಸ್ವಾತಂತ್ರ್ಯವನ್ನು ನಮ್ಮ ಸಮಾಜ ಒಪ್ಪುತ್ತದೆ. ಯಾಕೆ ಒಪ್ಪುತ್ತದೆಂದರೆ, ಎಲ್ಲರಿಗೂ ಮುಕ್ತ ಸ್ವಾತಂತ್ರ್ಯ ಕೊಟ್ಟಾಗ ರಸ್ತೆಯಲ್ಲಿ ಉಂಟಾಗಬಹುದಾದ ಅಲ್ಲೋಲಕಲ್ಲೋಲಕ್ಕಿಂತ, ಅ-ಸ್ವಾತಂತ್ರ್ಯದಲ್ಲಿರುವ ಶಿಸ್ತು ಉತ್ತಮ ಎನ್ನುವುದನ್ನು ಸಮಾಜ ಸಾರ್ವತ್ರಿಕವಾಗಿ ಒಪ್ಪುತ್ತದೆ.

ಮಾರುಕಟ್ಟೆಗಳು ನಿಜಕ್ಕೂ ಮುಕ್ತವಾಗಿವೆಯೇ? ಮುಕ್ತ ಮಾರುಕಟ್ಟೆಯಲ್ಲಿ ನಮಗೆ ಬೇಕಾದ್ದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದೆ. ಹೀಗಾಗಿ, ಅದು ಸ್ವಾತಂತ್ರ್ಯವನ್ನು ಬೆಂಬಲಿಸುತ್ತದೆಂದು ನಾವು ನಂಬಬೇಕು. ಆದರೆ ಮುಕ್ತ ಮಾರುಕಟ್ಟೆಯಲ್ಲಿ ಆಯ್ಕೆಯ ಸ್ವಾತಂತ್ರ್ಯವಿದೆ ಎನ್ನುವ ವಾದ ಸರಳವಾಗಿ ಒಪ್ಪಲು ಸಾಧ್ಯವಿಲ್ಲ. ಮಾರುಕಟ್ಟೆಯನ್ನು ಪ್ರತಿಪಾದಿಸುವವರು ಮುಕ್ತ ಮಾರುಕಟ್ಟೆಗಳು ಪೈಪೋಟಿಯನ್ನು ಪ್ರೋತ್ಸಾಹಿಸುತ್ತವೆ ಹಾಗೂ ಪೈಪೋಟಿಯಿಂದಾಗಿ ಆಯ್ಕೆಗಳು ಉಂಟಾಗುತ್ತದೆಂದು ವಾದಿಸುತ್ತಾರೆ. ಆದರೆ ವಾಸ್ತವದಲ್ಲಿ ಯಾವುದೇ ಮಾರುಕಟ್ಟೆ ಪೂರ್ಣ ಪೈಪೋಟಿಯ ಹಂದರವನ್ನು ಹೊಂದಿರುವುದಿಲ್ಲ. ಕೊಡು-ಕೊಳ್ಳುವ ವ್ಯವಹಾರದಲ್ಲಿ ಮಾರುವವರಿಗೂ, ಖರೀದಿ ಮಾಡುವವರಿಗೂ ನಡುವೆ ಒಂದು (ಲಿಖಿತ ಅಥವಾ ಅಲಿಖಿತ) ಒಪ್ಪಂದವಿರುತ್ತದೆ. ಆದರೆ ಈ




ಒಪ್ಪಂದವನ್ನು ಜಾರಿ ಮಾಡುವ ಶಕ್ತಿ ಎರಡೂ ಪಕ್ಷಗಳಲ್ಲಿ ಸಮಾನವಾಗಿರುವುದಿಲ್ಲ. ಹೀಗಾಗಿ ಮಾರಾಟ ಮಾಡುವ ವರ್ತಕರ ಶಕ್ತಿ ಹೆಚ್ಚಿದ್ದರೆ ಒಪ್ಪಂದವನ್ನು ಜಾರಿ ಮಾಡುವ, ಅಥವಾ ಅದನ್ನು ಜಾರಿ ಮಾಡದೇ ಬಚಾವಾಗುವ ಶಕ್ತಿ ಒಪ್ಪಂದದ ಒಂದೇ ಪಕ್ಷದಲ್ಲಿ ಕೇಂದ್ರೀಕೃತವಾಗಿ, ಅದು ಶೋಷಣೆಯತ್ತ ತಿರುಗಬಹುದು.

ಮಾರುಕಟ್ಟೆಯಲ್ಲಿನ ದಕ್ಷತೆಯನ್ನು ಹಿಡಿದು ಹೊರಟಾಗ, ಗೆಲ್ಲುವವರು ಸೋತವರಿಗಿಂತ ಹೆಚ್ಚಿನ ದಕ್ಷತೆ ತೋರಿದ್ದಾರೆಂದು ನಾವು ನಂಬುತ್ತೇವೆ. ಹಾಗೇ ಇರಬೇಕೆಂದೇನೂ ಇಲ್ಲ. ಲಾಭಾರ್ಜನೆಯನ್ನು ಹೆಚ್ಚಿಸುವ ದಕ್ಷತೆ (ಮಾನವ ಸಂಪನ್ಮೂಲವನ್ನೊಳಗೊಂಡು) ಅಷ್ಟೂ ಸಂಪನ್ಮೂಲಗಳನ್ನು ಹಿಂಡಿ ಅದರಲ್ಲಿರುವ ಸಾರದ ಅಂತಿಮ ಕಣವನ್ನು ತೆಗೆಯುವುದರಿಂದಲೂ ಹೆಚ್ಚಿನ ಲಾಭಾರ್ಜನೆ, ತನ್ಮೂಲಕ ಹೆಚ್ಚಿನ ದಕ್ಷತೆ ತೋರಲು ಸಾಧ್ಯವಿದೆ. ಈ ಸಂದರ್ಭದಲ್ಲಿ ಸರ್ಕಾರದ ಪಾತ್ರವು ಪ್ರಾಥಮಿಕತೆಯನ್ನು ಪಡೆಯುತ್ತದೆ. ಮುಕ್ತ ಮಾರುಕಟ್ಟೆಯಲ್ಲಿರುವ ಅನಿಯಂತ್ರಿತ ಸ್ವಾತಂತ್ರ್ಯವನ್ನು